**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಸಿ.ಸಿ. 241–2016**

| | | |
|---|---|---|
| ಹೆಸರು | ನಾರಾಯಣಮ್ಮ | ಪ್ರಾ.ಸಾ.3 |
| ಗಂಡನಹೆಸರು | ನಾರಾಯಣಪ್ಪ | ಚಾ.ಸಾ.2 |
| ವಯಸ್ಸು | 70ವರ್ಷ | |
| ಕೆಲಸ | ವ್ಯವಸಾಯ | ಸಾ.ಪ್ರ.ವ.ಬೋ |
| ಹಾಲಿ ವಾಸ | ಭೋದನಹೊಸಹಳ್ಳಿ | ದಿ:20–11–2019 |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ರವರಿಂದ:–**

ನಾಲ್ಕು ವರ್ಷಗಳ ಹಿಂದೆ ರಾತ್ರಿ 7 ಗಂಟೆ ಸಮಯದಲ್ಲಿ ಆರೋಪಿಗಳು ಚಾ.ಸಾ.1 ರವರ ಜೊತೆ ಜಗಳ ಮಾಡುತ್ತಿದ್ದರು. ಚಾ.ಸಾ.1 ನಮ್ಮ ಅಕ್ಕ ಪಕ್ಕದವರು. ಕುಂಬಳಗಿಡಕ್ಕೆ ದನಗಳನ್ನು ಮೇಯಿಸಲು ಬಿಟ್ಟಿದ್ದಕ್ಕೆ ಜಗಳವಾಗಿತ್ತು. ಆರೋಪಿತರಲ್ಲಿ 3ನೇ ಆರೋಪಿ ಚಾ.ಸಾ.1 ರವರಿಗೆ ದೊಣ್ಣೆಯಿಂದ ತಲೆಗೆ ಹೊಡೆದಿರುತ್ತಾನೆ. ಆಗ ನಾನು ಮತ್ತು ಚಾ.ಸಾ.3 ಜಗಳ ಬಿಡಿಸಿರುತ್ತೇವೆ. ನಂತರ ಚಾ.ಸಾ.1 ರವರನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಜಗಳ ಮಾಡಿದವರು ಈ ದಿನ ನ್ಯಾಯಾಲಯದ ಮುಂದೆ ಇರುತ್ತಾರೆ. ಸಾಕ್ಷಿ 4 ಜನ ಆರೋಪಿಗಳನ್ನು ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ದೊಣ್ಣೆಯನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:–**

ಚಾ.ಸಾ.3 ನನ್ನ ಮಗ ಎಂದರೆ ಸರಿ. ಚಾ.ಸಾ.1 ನನ್ನ ಅಕ್ಕನ ಮಗ ಎಂದರೆ ಸರಿಯಲ್ಲ. ಚಾ.ಸಾ.1 ನನ್ನ ಹತ್ತಿರದ ಸಂಬಂಧೀ ಎಂದರೆ ಸರಿಯಲ್ಲ. ನಾನು ಭೋದನಹೊಸಹಳ್ಳಿಯಲ್ಲಿ ಇರುತ್ತೇನೆ ಎಂದರೆ ಸರಿ. ಚಾ.ಸಾ.3 ಸಹ ಭೋದನಹೊಸಹಳ್ಳಿಯಲ್ಲಿಯೇ ವಾಸವಾಗಿದ್ದಾರೆ ಎಂದರೆ ಸರಿ. ಕುಂಬಳಗಿಡ ಚಾ.ಸಾ.1 ರವರದ್ದು ಆಗಿತ್ತು. ಅದು ಅವರ ಮನೆ ಹಿಂಭಾಗದಲ್ಲಿ ಇತ್ತು. ಅದು ಸತೀಶ್ ಎಂಬುವವರ ಸೈಟ್‌ನಲ್ಲಿ ಬೆಳೆದಿತ್ತು ಎಂದರೆ ಸರಿಯಲ್ಲ. ನಾನು ನೋಡುವಷ್ಟರಲ್ಲಿ ಗಲಾಟೆ ಮುಗಿದಿತ್ತು ಎಂದರೆ ಸರಿ. ಯಾರು ಯಾರಿಗೆ ಹೊಡೆದರು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ.

ಸರ್ಕಾರಿ ಆಸ್ಪತ್ರೆಗೆ 8 ಗಂಟೆಗೆ ಹೋಗಿದ್ದೇವು. ನಾವು ಆಟೋದಲ್ಲಿ 7.30 ಕ್ಕೆ ಆಸ್ಪತ್ರೆಗೆ ಹೋಗಿದ್ದೇವು. ನಾನು ಹೇಳಿದಂತೆ ಯಾವುದೇ ಘಟನೆ ಆಗದೇ ಇದ್ದರು, ಚಾ.ಸಾ.1 ರವರಿಗೆ ಸಹಾಯ ಮಾಡಲು ಆರೋಪಿಗಳ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1ಕ್ಕು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮು.ಮಾ.1 ಅನ್ನು 3ನೇ ಆರೋಪಿ ತೆಗೆದುಕೊಂಡು ಬಂದಿದ್ದರು. ನಾನು ಯಾವುದೇ ಘಟನೆಯನ್ನು ನೋಡದೇ ಇದ್ದರೂ, ಚಾ.ಸಾ.1 ರವರು ನನ್ನ ಸಂಬಂಧೀಕರಾಗಿದ್ದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**